**OS.No.19/2019**
**P.W-3**

**( ದಿನಾಂಕ.08-12-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** ಶ್ರೀ.S.S.C ವಕೀಲರಿಂದ

ನನ್ನ ಸ್ವಂತ ಊರು ಆಳಂದ. ವಾದಿ ಮತ್ತು ಪ್ರತಿವಾದಿಯರು ನನಗೆ 25 ವರ್ಷಗಳಿಂದ ಪರಿಚಯವಿರುತ್ತಾರೆ. ನನ್ನ ಸ್ವಂತ ಜಮೀನು ಇರುತ್ತದೆ. ಅದು 5 ಎಕರೆ 15 ಗುಂಟೆ ಜಮೀನು ಮಮದಾಪುರ ಗ್ರಾಮದಲ್ಲಿ ಇರುತ್ತದೆ. ಸದರಿ ನನ್ನ ಜಮೀನಿನ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ವಾದಿ 4 ಎಕರೆ 18 ಗುಂಟೆ ಜಮೀನದಲ್ಲಿ ಸ್ವಾಧೀನ ಇರುತ್ತಾನೆಂದು ನಾನು ಅಳತೆ ಮಾಡಿಲ್ಲ ಹಾಗೂ ಬೇರೆಯವರು ಅಳತೆ ಮಾಡುವಾಗ ನಾನು ಹಾಜರಿರಲಿಲ್ಲ. ನಾನು ವಾದಿ ಮತ್ತು ಪ್ರತಿವಾದಿಯರ ಸ್ವತ್ತುಗಳ ಪಹಣಿ ಪತ್ರಿಕೆಗಳನ್ನು ನೋಡಿಲ್ಲ. ಯಾವ ಆಧಾರದಲ್ಲಿ ವಾದಿ 4 ಎಕರೆ 18 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರುತ್ತಾನೆಂದು ಕೇಳಿದ ಪ್ರಶ್ನೆಗೆ ಸಾಕ್ಷಿ 25 ವರ್ಷಗಳಿಂದ ಅವರೇ ಇರುತ್ತಾರೆ. ಅದರ ಆಧಾರದ ಮೇಲೆ ಹೇಳುತ್ತೇನೆಂದು ನುಡಿಯುತ್ತಾರೆ ಹಾಗೂ 25 ವರ್ಷಗಳಿಂದ ಬಂದಾರಿ ಇರುತ್ತದೆ ಎಂದು ನುಡಿಯುತ್ತಾರೆ.

ಸದರಿ 4 ಎಕರೆ 18 ಗುಂಟೆಯಲ್ಲಿ ವಾದಿ ಸ್ವಾಧೀನದಲ್ಲಿ ಇರುತ್ತಾನೆಂದು ಬಂದಾರಿ ನೋಡಿ ಹೇಳುತ್ತಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನೋಡಿದಾಗಿನಿಂದ ಅಂದರೆ 25 ವರ್ಷಗಳಿಂದ ಬಂದಾರಿ ಇದೆ ಎಂದು

**OS.No.19/2019**
**P.W-3**

ನುಡಿಯುತ್ತಾರೆ. ಸದರಿ ಬಂದಾರಿ ಪೂರ್ವಕ್ಕೆ ವಿಭೂತಿ ಅಣ್ಣಾರಾವ ಪಾಟೀಲರವರ ಜಮೀನು ಇರುತ್ತದೆ. ಪಶ್ಚಿಮಕ್ಕೆ ಹೊಸಳ್ಳಿ ದೂಳಪ್ಪಾರವರ ಜಮೀನು, ಉತ್ತರಕ್ಕೆ ಪ್ರತಿವಾದಿ ಜಮೀನು ಇರುತ್ತದೆ. ವಾದಿ ಸುಮಾರು 25 ವರ್ಷಗಳಿಂದ 4 ಎಕರೆ 18 ಗುಂಟೆ ಜಮೀನು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇರುತ್ತಾನೆಂದು ಯಾವುದೇ ಅಧಾರ ಇಲ್ಲದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಗೆಳೆಯರಿದ್ದು, ಆ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು 7 ವರ್ಷಗಳ ಕಾಲ ನಾನು ದಾವಾ ಸ್ವತ್ತಿನಲ್ಲಿ ಪಾಲಿನ ಮೇಲೆ ಸಾಗುವಳಿ ಮಾಡಿರುತ್ತೇನೆ. ಈಗ ದಾವಾ ಸ್ವತ್ತಿನಲ್ಲಿ ಸಾಗುವಳಿ ಮಾಡವುದು ಬಿಟ್ಟು 5 ವರ್ಷವಾಗಿರುತ್ತದೆ. ಪಾಲಿನ ಮೇಲೆ ಮಾಡಿದ ಬಗ್ಗೆ ಯಾವುದೇ ಲಿಖಿತ ದಾಖಲೆ ಆಗಿಲ್ಲ. ನಾನು ಸಾಗುವಳಿ ಮಾಡುವ ಕಾಲಕ್ಕೆ ಕಂದಾಯ ಕಟ್ಟಿಲ್ಲ. ಆದರೆ ವಾದಿ ಕಟ್ಟಿರುತ್ತಾನೆ. ನಾನು ವಾದಿಯ ಜಮೀನನ್ನು ಪಾಲಿನ ಮೂಲಕ ಸಾಗುವಳಿ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**